# ಆತ್ಮ ಸಂಸ್ಕೃತಿ ಮತ್ತು ಯುವ ಶಿಕ್ಷಣ

**ವಿಜಯಕುಮಾರ**

**ಆತ** ಸ್ಫುರದ್ರೂಪಿ. ಆದರೆ ಅದಷ್ಟು ಅಚ್ಚರಿ ಮೂಡಿಸುವ ವಿಷಯವಾಗಿರಲಿಲ್ಲ. ಆತ ಚಿಕ್ಕಂದಿನಿಂದಲೂ ಓದಿನಲ್ಲಿ ಮುಂದೆಯೇ ಇದ್ದು ಸ್ನಾತಕೋತ್ತರ ನಂತರ ಡಾಕ್ಟರೇಟ್ ಪದವಿಗಳು ಆತನಿಗೆ ಬಂದದ್ದೂ ನಂತರ ಖ್ಯಾತ ತಾಂತ್ರಿಕ ಪರಿಣತಿಯ ಸಂಸ್ಥೆಯಲ್ಲಿ ವಿಜ್ಞಾನಿಯಾಗಲು ಅವಕಾಶ ಆತನ ಮನೆ ಬಾಗಿಲಿಗೇ ಹುಡುಕಿಕೊಂಡು ಬಂದದ್ದೂ ಅಂತಹ ವಿಶೇಷವಾದ ವಿಷಯವೇನೂ ಅಲ್ಲ. ಆದರೆ ಆತ ಸಮಯ ಸಿಕ್ಕಾಗಲೆಲ್ಲ ತಪ್ಪದೆ ವೇದಾಂತದ ಪಾಠ ಹೇಳಿಸಿಕೊಳ್ಳುತ್ತಿದ್ದ. ಅವರ ಬೋಧನೆಯ ಪ್ರಭಾವದಿಂದಲೋ ಏನೋ ಇತರರಿಗಿಂತ ಭಿನ್ನವಾಗಿ ಯೋಚನೆ ಮಾಡಲು ಹೊರಟಿದ್ದು ಮನೆಯವರಿಗೆ ನುಂಗಲಾರದ ತುತ್ತಾಗಿತ್ತು. ಖ್ಯಾತ ವಿಜ್ಞಾನ ಸಂಸ್ಥೆಯ ಉನ್ನತ ಹುದ್ದೆಯಲ್ಲಿದ್ದೂ ತನ್ನ ಧಾರ್ಮಿಕ ಒಲವುಗಳನ್ನು ಹೇಳಿಕೊಳ್ಳಲು ಸಂಕೋಚವೇಕೆ ಎಂಬಂತೆ ಆತ ಕಟ್ಟಾ ಸನಾತನಿಯಂತೆ ತನ್ನ ಸಂಪ್ರದಾಯದ ಮತೀಯ ಚಿಹ್ನೆಗಳಿಂದ ತೇಜಸ್ವೀ ಮುಖದೊಡನೆ ಕಾರ್ಯಕ್ಷೇತ್ರಕ್ಕೂ ಹೋಗುತ್ತಿದ್ದ. ಕೆಲಸದ ಕ್ಷೇತ್ರದಲ್ಲಿ ಆತನ ಸಂಪ್ರದಾಯ ಪ್ರಿಯತೆ ಇತರರಲ್ಲಿ ಕೌತುಕವನ್ನುಂಟು ಮಾಡಿದ್ದರೂ, ಅವರಿಗೆ ಕುತೂಹಲಕ್ಕಿಂತ ಹೆಚ್ಚಿಗೆ ಆತನಲ್ಲಿ ಆದರವಿತ್ತು. ಕಾರಣ ಆತನ ತೀಕ್ಷ್ಣವಾದ ಬುದ್ಧಿಮತ್ತೆ, ಸಂಶೋಧನೆಯ ಕ್ಷೇತ್ರದಲ್ಲಿ ಆತನು ತೋರುತ್ತಿದ್ದ ಅಪಾರವಾದ ಶ್ರದ್ಧೆ, ಎಲ್ಲಕ್ಕೂ ಮಿಗಿಲಾಗಿ ಸವಾಲುಗಳನ್ನು ನಿರ್ವಹಿಸುತ್ತಿದ್ದ ರೀತಿ—ಇವೆಲ್ಲದರಿಂದಾಗಿ ಆತನ ಸಹೋದ್ಯೋಗಿಗಳು ಆತನಲ್ಲಿ ವಿಶೇಷ ಗೌರವವನ್ನಿಟ್ಟುಕೊಂಡಿದ್ದರು.

> ಬೇರೆ ಸಂಸ್ಕೃತಿಯನ್ನು ಪ್ರೀತಿಸು, ಆದರೆ ನಿನ್ನ ಸಂಸ್ಕೃತಿಯಲ್ಲಿ ಜೀವಿಸು.
>
> — *ಮಹಾತ್ಮಾ ಗಾಂಧಿ*

ವೃತ್ತಿಯಲ್ಲಿ ವಿಜ್ಞಾನಿಯಾಗಿದ್ದರೂ, ವೇದಾಂತದ ವಿಚಾರಗಳ ಬಗೆಗೆ ಆತನ ಒಲವು ಮತ್ತು ಬದುಕಿನ ಶೈಲಿ ಎಂದೂ ಆತನಿಗೆ ಅಸಮಂಜಸವೆಂಬಂತೆ ಕಂಡುಬರುತ್ತಿರಲಿಲ್ಲ. ಬದಲಾಗಿ ಆತನ ಒಟ್ಟಾರೆ ಬದುಕಿನಲ್ಲಿ ತನ್ನ ಕಾರ್ಯಕ್ಷೇತ್ರ, ತನ್ನ ಸಂಪ್ರದಾಯದಿಂದ ಮೂಡಿ ಬಂದ ವಿಚಾರಗಳು, ಆರೋಗ್ಯಕರವಾದ ವೈಯಕ್ತಿಕ ಆಚಾರಗಳು ಎಲ್ಲವೂ ಹದವಾಗಿ ಸಮನ್ವಯಗೊಂಡಿದ್ದವು. ಪಾಶ್ಚಾತ್ಯ ವಿಜ್ಞಾನಿಗಳ ವಸ್ತುನಿಷ್ಠಪ್ರಿಯತೆ, ಬೌದ್ಧಿಕ ಶಿಸ್ತು, ಕ್ರಮಬದ್ಧತೆ ಇವುಗಳೊಂದಿಗೆ ತನ್ನ ಸಂಪ್ರದಾಯದಲ್ಲಿ ನೆಲೆಯೂರಿದ ಹೆಮ್ಮೆಗೂ ಆತನು ಭಾಗಿಯಾಗಿದ್ದ.

## ಪಾಶ್ಚಾತ್ಯರಿಂದ ಕಲಿಯಬೇಕಾದ ಅಂಶಗಳು

ಆಕಸ್ಮಿಕವಾದರೂ ಇಂತಹ ವ್ಯಕ್ತಿವೈಶಿಷ್ಟ್ಯವುಳ್ಳವರು ಕೆಲವು ಪ್ರಶ್ನೆಗಳನ್ನು ಎಬ್ಬಿಸುವುದುಂಟು. ಪಶ್ಚಿಮ ದೇಶಗಳು ವಿಜ್ಞಾನ ಮತ್ತು ತಾಂತ್ರಿಕತೆಯಲ್ಲಿ ಸಾಧಿಸಿರುವ ಮುನ್ನಡೆ ನಮ್ಮ ಬದುಕನ್ನು ತೀವ್ರವಾಗಿ ಪ್ರಭಾವಗೊಳಿಸಿವೆ. ಆದರೆ ಆ ಪ್ರಭಾವಗಳನ್ನು ಅರಗಿಸಿಕೊಳ್ಳುವ ಸಾಮರ್ಥ್ಯ ಎಲ್ಲರಲ್ಲೂ ಒಂದೇ ಸಮನಾಗಿಲ್ಲ ಎಂಬುದೂ ನಿಜ. ಕೇವಲ ಪಾಶ್ಚಾತ್ಯರ ಥಳುಕಿನ ಬದುಕಿನ ಶೈಲಿ, ಅವರ ವಿಲಾಸಗಳು, ಮುಂತಾದವು ನಮ್ಮ ಮನಸೆಳೆಯುವಂತೆ ಆಧುನಿಕ ಚಿಂತನೆಯ ಆಳದಲ್ಲಿರುವ ವೈಜ್ಞಾನಿಕ ಮನೋಧರ್ಮ ನಮ್ಮ ಮನಸ್ಸನ್ನು ಆಕರ್ಷಿಸಿಲ್ಲ. ವೈಜ್ಞಾನಿಕ ಮನಸ್ಸಿನ ಗುಣಮಟ್ಟದ ಹಿಂದೆ, ಸತ್ಯಾನ್ವೇಷಣೆಯ ತುಡಿತ, ವಸ್ತುನಿಷ್ಠೆ, ಬೌದ್ಧಿಕ ಶಿಸ್ತು, ಕ್ರಮಬದ್ಧತೆ, ಸಂಘಟಿತವಾಗಿ ಕೆಲಸ ಮಾಡುವ ಅವರ ಪ್ರವೃತ್ತಿ ಇವೆಲ್ಲವೂ ನಮ್ಮಲ್ಲಿನ ಸಾಮಾನ್ಯರ ಕಲ್ಪನೆಗಿರಲಿ ಅನೇಕ ಬುದ್ಧಿಜೀವಿಗಳ ಕಲ್ಪನೆಗೂ ಎಟುಕದಿರುವಂಥದ್ದು ಎಂದರೆ ಅತಿಶಯೋಕ್ತಿಯೇನಲ್ಲ. ತಂಡದಲ್ಲಿ ಒಂದಾಗಿ ಒಗ್ಗಟ್ಟಿನಿಂದ ಕೆಲಸ ಮಾಡುವ ಕಲೆ ಪಾಶ್ಚಾತ್ಯರಿಗೆ ಕರಗತವಾಗಿರುವುದೇ ಅವರ ಯಶಸ್ಸಿನ ಗುಟ್ಟು ಎಂಬುದನ್ನು ಮರೆತು ಕೇವಲ ಅಲ್ಲಿನ ಥಳಕಿನ ಬದುಕಿಗೆ ಮಾರುಹೋದವರೇ ಬಹಳ ಮಂದಿ. ಇಂತಹ ಮಂದಿಯಲ್ಲಿ ನಮ್ಮ ಸಂಸ್ಕೃತಿ ಪರಂಪರೆಯ ಬಗ್ಗೆ ಇರುವ ಅಜ್ಞಾನ ಅಗಾಧವಾದದ್ದು. ಪಾಶ್ಚಾ ತ್ಯರ ಯಶಸ್ಸಿನ ನಿಜವಾದ ರಹಸ್ಯಗಳನ್ನು ಅರಿತು ಅವುಗಳನ್ನು ನಮ್ಮ ಬದುಕಿನಲ್ಲಿ ಸಮರಸಗೊಳಿಸಲು ಪ್ರಯತ್ನಿಸದಿರುವುದೇ ಆ ಸಂಸ್ಕೃತಿಯಿಂದ ಬೇಡ

ವಾವನ್ನು, ನಮ್ಮ ಬೆಳವಣಿಗೆಗೆ ಮಾರಕವಾದುದನ್ನು ಆಮದು ಮಾಡಿಕೊಂಡಿರುವುದಕ್ಕೆ ಕಾರಣವಾಗಿರಬಹುದೇ?

## ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕು

ಸತ್ಯಶೋಧನೆಯನ್ನೇ ಗುರಿಯಾಗಿರಿಸಿಕೊಂಡ ವೈಜ್ಞಾನಿಕ ದೃಷ್ಟಿಕೋನವನ್ನು ಮೈಗೂಡಿಸಿಕೊಳ್ಳುವುದರಿಂದ ನಮ್ಮ ಸಂಸ್ಕೃತಿಯಲ್ಲೇ ಯಾವತ್ತೂ ಇರುವ ಅಂತಹ ಅಂಶಗಳು ಪುನರುಜ್ಜೀವನಗೊಂಡು ಹೆಚ್ಚು ಬೆಳಕಿಗೆ ಬಂದಂತಾಗುತ್ತದೆ. ಸತ್ಯಶೋಧನೆಯ ಕ್ಷೇತ್ರಗಳು ಬೇರೆಯದಾಗಿರಬಹುದು, ಆದರೆ ಸತ್ಯಕ್ಕಾಗಿ ಇರುವ ಹಂಬಲ––ಪಾಶ್ಚಾತ್ಯ, ಪೌರಸ್ತ್ಯ ಎಂಬ ಭೇದವಿಲ್ಲದ ಆ ಹಸಿವು—ಎಲ್ಲೇ ಇರಲಿ ವ್ಯಕ್ತಿಯನ್ನು ಪರಿಶುದ್ಧನನ್ನಾಗಿಸುತ್ತದೆ. ನಮ್ಮ ಪ್ರಾಚೀನ ಪರಂಪರೆಯ ಅಮೂಲ್ಯ ಭಾಗಗಳನ್ನು ಉಳಿಸಿಕೊಳ್ಳುವುದರಲ್ಲಿ ನಮ್ಮ ಬುದ್ಧಿವಂತಿಕೆ ಇದೆ. ಹಾಗೆಯೇ ಅಲ್ಲಿ ಕಳೆಯಂತೆ ಬೆಳೆದಿರುವ ಮೂಢನಂಬಿಕೆಗಳನ್ನೂ ಶೋಷಣಾ ಶಕ್ತಿಗಳನ್ನೂ ದುರ್ಬಲಗೊಳಿಸುವ ಪ್ರತಿಯೊಂದನ್ನೂ ಕಿತ್ತೆಸೆಯಲು ವೈಜ್ಞಾನಿಕ ದೃಷ್ಟಿ ನಮ್ಮ ನೆರವಿಗೆ ಬರುತ್ತದೆ. ಮಾನವಾತ್ಮವನ್ನು ಆಧ್ಯಾತ್ಮಿಕವಾಗಿ ಪೋಷಿಸುವ, ನಮ್ಮನ್ನು ಸಾಂಸ್ಕೃತಿಕವಾಗಿ ಮೇಲಕ್ಕೆತ್ತಿ ನಮ್ಮ ಜೀವನವನ್ನು ಗುಣಾತ್ಮಕವಾಗಿ ಶ್ರೀಮಂತಗೊಳಿಸುವ ಸಾರವಸ್ತುವನ್ನು ನಾವು ಉಳಿಸಿಕೊಳ್ಳಬೇಕಾಗಿದೆ.

## ಧರ್ಮದ ನೈಜ ಉದ್ದೇಶ

ಸಂಸ್ಕೃತಿ ಮತ್ತು ಪರಂಪರೆ ಕುರಿತಂತೆ ನಮ್ಮಲ್ಲಿರುವ ನಾನಾ ತಪ್ಪು ತಿಳಿವಳಿಕೆಗಳನ್ನು ನಾವು ತಿದ್ದಿಕೊಳ್ಳುವುದು ಒಳ್ಳೆಯದು. ಧರ್ಮ ಎಂದರೆ ಏನೋ ಮುದಿತನದಲ್ಲಿ, ಅದರಲ್ಲೂ ಮರಣ ಕಾಲದಲ್ಲಿ ಭಾವಿಸಬೇಕಾದುದು ಎಂಬುದೇ ನಮ್ಮ ಕಲ್ಪನೆ. ಆ ಸಮಯದಲ್ಲಿ ನಾವು ಧರ್ಮದಿಂದ ಬಯಸುವುದು ಒಂದನ್ನೇ––ಸ್ವರ್ಗಕ್ಕೆ ಟಿಕೆಟ್ಟು! ನಾವು ಧರ್ಮವಿಜ್ಞಾನದ ಭಾವವನ್ನು ಅರ್ಥ ಮಾಡಿಕೊಳ್ಳಬೇಕು. ಬಾಳಿನಲ್ಲಿ ಸತ್ಯಕೇಂದ್ರಿತವಾದ ಅನ್ವೇಷಣೆಯ ಮೂಲಕ ಭೌತಿಕ, ಮಾನಸಿಕ ಹಾಗೂ ಆಧ್ಯಾತ್ಮಿಕವಾದ ಸರ್ವತೋಮುಖ ಪ್ರಗತಿಯೇ ಇದರ ಆದರ್ಶ. ಇದೇ ಯುವ ಶಕ್ತಿಗಳ ಶುದ್ಧ, ಹೆಚ್ಚು ಶುದ್ಧ ರೂಪಗಳನ್ನು ಪ್ರವಹಿಸುವ ವೇದಾಂತ ವಿಧಾನ. ಧರ್ಮದ ಆಶಯ ಇದೇ ಆದಲ್ಲಿ ನಮ್ಮಲ್ಲಿ ಯುವಸತ್ತ್ವ ಮತ್ತು ಶಕ್ತಿ ಇರುವಾಗಲೇ ಇದನ್ನು ಅರಸುವುದು ಅತ್ಯುತ್ತಮ. ಜಡವಾಗಿ, ಮುದಿಯಾಗಿ, ಜರ್ಝರಿತವಾದಾಗ ಅಲ್ಲ. ಉದಾಹರಣೆಗೆ ಪ್ರಕೃತಿಯ ಶಕ್ತಿಗಳನ್ನು ನಿಭಾಯಿಸುವಾಗ ನಾವು ಅಣೆಕಟ್ಟು ಯಾವಾಗ ಕಟ್ಟುತ್ತೇವೆ? ನದಿಯಲ್ಲಿ ನೀರು ಹರಿಯುತ್ತಿರುವಾಗ; ನೀರೇ ಹರಿಯುತ್ತಿಲ್ಲವಾದಾಗ ಕಟ್ಟೆ ಕಟ್ಟುವುದರಲ್ಲಿ ಏನೂ ಅರ್ಥವಿಲ್ಲ. ನದಿಯಲ್ಲಿ ನೀರು ಹರಿಯುತ್ತಿರುವಾಗ ಮಾತ್ರವೇ ನದೀ ನಿಯಂತ್ರಣದ ಕಾರ್ಯಕ್ರಮವೆಲ್ಲ ಸಾಧ್ಯ. ಅದೇ ರೀತಿ ನಮ್ಮಲ್ಲಿ ಯುವಶಕ್ತಿ ಇರುವಾಗ ಮಾತ್ರ ಅದರ ತರಬೇತಿ, ಶಿಸ್ತುಗೊಳಿಸುವಿಕೆ ಮತ್ತು ಸಂಸ್ಕರಣ ಎಲ್ಲವೂ ಅರ್ಥಪೂರ್ಣವಾಗುತ್ತವೆ, ಫಲಪ್ರದವಾಗುತ್ತವೆ.

## ಬಾಹ್ಯಾಂತರ ಸಾಧನೆ

ಹೊರ ಅಂತಸ್ತಿನ ಉನ್ನತಿ, ಸಂಪತ್ತು, ಸಮಾಧಾನ ಇವೇ ಸಾಧಿಸಲರ್ಹವಾದವೆ ಅಥವಾ ಇವಕ್ಕಿಂತ ಉನ್ನತವಾದುದು ಏನಾದರೂ ಇದೆಯೆ? ಎಂಬ ಪ್ರಶ್ನೆಯನ್ನು ನಮ್ಮ ತಾರುಣ್ಯದಲ್ಲಿಯೇ, ಯುವಶಕ್ತಿ ನಮ್ಮ ಧಮನಿಗಳಲ್ಲಿ ಪ್ರವಹಿಸುತ್ತಿರುವಾಗಲೇ ಕೇಳಿಕೊಳ್ಳಬೇಕು. ಜೂರಿಚ್‌ನ ಖ್ಯಾತ ಮನಶ್ಶಾಸ್ತ್ರಜ್ಞರಾದ ಕಾರ್ಲ್ ಯುಂಗ್, ತಮ್ಮ "ಆತ್ಮಾನ್ವೇಷಣೆಯಲ್ಲಿ ಆಧುನಿಕ ಮಾನವ" (*Modern Man in Search of a Soul*) ಎಂಬ ಪುಸ್ತಕದಲ್ಲಿ ಬಾಹ್ಯ ಅಭಿವೃದ್ಧಿ ಮತ್ತು ಅಂತಃಸ್ಸಾಕ್ಷಾತ್ಕಾರ ಎರಡರ ನಡುವೆ ವ್ಯತ್ಯಾಸವನ್ನು ಗುರುತಿಸುತ್ತಾ, ಎರಡನೆಯದರ ಪ್ರಾಮುಖ್ಯವನ್ನು ಒತ್ತಿಹೇಳುತ್ತಾರೆ. ನಾವು ಯುವಕರಾಗಿರುವಾಗ, ನಮ್ಮ ಮನಸ್ಸು ಬಹಿರ್ಮುಖವಾಗಿರುತ್ತದೆ, ಈ ಬಾಹ್ಯ ಜಗತ್ತನ್ನು ಗೆಲ್ಲುವ ಹಂಬಲ ನಮಗೆ, ಈ ಜಗತ್ತಿನಲ್ಲಿ ಒಂದು ಸ್ಥಾನ ಪಡೆಯುವ ಆಸೆ ನಮಗೆ ಇರುತ್ತದೆ ಎನ್ನುತ್ತಾರೆ ಯುಂಗ್. ಯುವಜನ ಶಿಕ್ಷಣ ಪಡೆಯಲೆಳಸುವುದು, ಒಳ್ಳೆಯ ಉದ್ಯೋಗಕ್ಕೆ ಪ್ರಯತ್ನಿಸುವುದು, ಸಂಸಾರಾಭಿವೃದ್ಧಿ, ಸಮಾಜಸೇವೆ ಮಾಡುವ ಆಸೆ, ಇತಿಹಾಸದಲ್ಲಿ ಅಚ್ಚೊತ್ತುವುದು—ಇದನ್ನು ಅವರು ಸಾಧನೆ (achievement) ಎನ್ನುತ್ತಾರೆ. ಆದರೆ ಈ ಸಾಧನೆಯೆ ಸಾಲದು ಎನ್ನುತ್ತಾರೆ ಯುಂಗ್. 'ನನ್ನ ಸ್ವರೂಪವನ್ನು ನಾನು ಅರಿತುಕೊಂಡಿರುವೆನೆ? ನಾನು ಆಧ್ಯಾತ್ಮಿಕವಾಗಿ ಬೆಳೆದಿರುವೆನೆ? ಆಂತರಂಗಿಕವಾಗಿ ಶ್ರೀಮಂತನಾಗಿರುವೆನೆ?' ಎಂದು ನಿಮ್ಮನ್ನೇ ಕೇಳಿಕೊಳ್ಳಲೂಬೇಕು ಎನ್ನುತ್ತಾರೆ. ಇದನ್ನೇ ಯುಂಗ್ ಸಂಸ್ಕೃತಿ ಅಥವಾ ವ್ಯಕ್ತಿತ್ವ ಎಂದು ಅರ್ಥೈಸುತ್ತಾರೆ. ಇದು ಆತ್ಮದ ಸಂಸ್ಕೃತಿ, ವ್ಯಕ್ತಿತ್ವದ ಶ್ರೀಮಂತಿಕೆ. ಅವರು ಹೇಳುತ್ತಾರೆ :

"ಸಾಧನೆ, ಉಪಯುಕ್ತತೆ ಇತ್ಯಾದಿಗಳು ಸಮಸ್ಯೆಗಳ ಸಂದಣಿಯ ಗೊಂದಲದ ನಡುವೆ (ಬಾಳಿನ ಎರಡನೆ ಘಟ್ಟದಲ್ಲಿ, ಅಂದರೆ ಪ್ರಾಯದಿಂದ ಮಧ್ಯ ವಯಸ್ಸಿನವರೆಗೆ) ನಮಗೆ ದಾರಿ ತೋರುವ ಆದರ್ಶಗಳಾಗಿ ತೋರುತ್ತವೆ. ನಮ್ಮ ಮಾನಸಿಕ ಅಸ್ತಿತ್ವದ ವಿಸ್ತರಣೆ ಹಾಗೂ ಸ್ಥಿರೀಕರಣದ ಸಾಹಸ ಯಾತ್ರೆಯಲ್ಲಿ ಅವು ಧ್ರುವ ನಕ್ಷತ್ರವಾಗಿರಬಹುದು. ಜಗತ್ತಿನಲ್ಲಿ ನಾವು ಬೇರು ಬಿಡಲು ಅವು ನೆರವಾಗಬಹುದು. ಆದರೆ ಸಂಸ್ಕೃತಿ ಎಂದು ನಾವು ಹೆಸರಿಸುವ ಆ ವಿಶಾಲ ಪ್ರಜ್ಞೆಯ ಅಭಿವೃದ್ಧಿಯಲ್ಲಿ ಅವು ನಮಗೆ ದಾರಿ ತೋರಲಾರವು. ಏನೇ ಆದರೂ ಯುವಾವಸ್ಥೆಯಲ್ಲಿ ಇದೇ ಮಾಮೂಲು ದಾರಿ ಮತ್ತು ಸಕಲ ಸನ್ನಿವೇಶಗಳಲ್ಲೂ, ಸಮಸ್ಯೆಗಳ ಸಂಕ್ಷೋಭೆಯಲ್ಲಿ ಸಿಕ್ಕಿ ಒದ್ದಾಡುವುದಕ್ಕಿಂತ ಇದೇ ಮೇಲು.

"ಮಧ್ಯ ವಯಸ್ಸನ್ನು ಸಮೀಪಿಸಿದಷ್ಟೂ ನಮ್ಮ ವೈಯಕ್ತಿಕ ನಿಲುವು ಹಾಗೂ ಸಾಮಾಜಿಕ ಸ್ಥಿತಿಗಳಲ್ಲಿ ನಮ್ಮನ್ನೇ ನೆಟ್ಟು

ಕೊಳ್ಳಲು ನಾವು ಯಶಸ್ವಿಯಾದಷ್ಟೂ, ನಮಗೆ ಅನಿಸುತ್ತದೆ, ಸರಿಯಾದ ದಾರಿ, ಸರಿಯಾದ ಆದರ್ಶಗಳನ್ನು, ನಡವಳಿಕೆಯ ಸೂತ್ರಗಳನ್ನು ನಾವು ಕಂಡುಕೊಂಡಿದ್ದೇವೆ ಎಂದು. ಈ ಕಾರಣಕ್ಕಾಗಿ ಅವು ಸದಾಕಾಲಕ್ಕೂ ಸಿಂಧು ಎಂದೇ ಊಹಿಸಿಕೊಳ್ಳುತ್ತೇವೆ ಮತ್ತು ಅವಕ್ಕೇ ಅಲುಗಾಡದೆ ಅಂಟಿಕೊಂಡಿರುವುದನ್ನೇ ದೊಡ್ಡ ಗುಣ ಎನ್ನುತ್ತೇವೆ. ವ್ಯಕ್ತಿತ್ವವನ್ನು ಕುಗ್ಗಿಸಿ ಸಾಮಾಜಿಕ ಪ್ರತಿಫಲಗಳನ್ನು ಗೆದ್ದೆವು ಎಂಬ ಮುಖ್ಯಾಂಶವನ್ನೇ ಪೂರ್ಣವಾಗಿ ನಿರ್ಲಕ್ಷಿಸಿರುತ್ತೇವೆ."

**ಒಂದು ಕಡೆ ಬುದ್ಧಿಗೆ ಸಂಸ್ಕಾರ, ಮತ್ತೊಂದು ಕಡೆ ಹೃದಯಕ್ಕೆ ಸಂಸ್ಕಾರ—ಈ ಎರಡೂ ಬಗೆಯ ಸಂಸ್ಕಾರಗಳಿಂದ ಪರಿಪಕ್ವವಾಗತಕ್ಕದ್ದು ಜೀವದ ಅಂತರಂಗ, ಹಾಗೆ ಪರಿಪಕ್ವವಾದ ಜೀವವು ಜಗತ್ತಿನೊಳಕ್ಕೆ ಉಸಿರುವ ಸುಗಂಧವೇ ಸಂಸ್ಕೃತಿ. — ಡಿ.ವಿ.ಜಿ.**

## ಪ್ರಕೃತಿ ಮತ್ತು ಸಂಸ್ಕೃತಿ

ವ್ಯಕ್ತಿತ್ವದ ಸಂಸ್ಕೃತಿ ಅಥವಾ ವ್ಯಕ್ತಿಯ ಆಧ್ಯಾತ್ಮಿಕ ಶ್ರೀಮಂತಿಕೆಗೆ ಜೀವನದಲ್ಲಿ ಮುಖ್ಯ ಸ್ಥಾನ ಇರಬೇಕೆಂದು ಪ್ರತಿಪಾದಿಸುತ್ತ, ಯುಂಗ್ ಮುಂದೆ ಹೇಳುತ್ತಾರೆ:

"ಮನುಷ್ಯಜೀವನದ ಮಧ್ಯಾಹ್ನಕ್ಕೂ ತನ್ನದೇ ಆದ ಒಂದು ಮಹತ್ವ ಇರಬೇಕು. ಅದು ಕೇವಲ ಬಾಳಿನ ಬೆಳಿಗ್ಗೆಯ ಬಾಲಂಗೋಚಿ ಆಗಬಾರದು. ನಿಸ್ಸಂದೇಹವಾಗಿಯೂ ಬೆಳಿಗ್ಗೆಯ ಮಹತ್ವ ಇರುವುದು ವ್ಯಕ್ತಿಯ ಅಭಿವೃದ್ಧಿಯಲ್ಲಿ. ಬಾಹ್ಯ ಜಗತ್ತಿನಲ್ಲಿ, ನಮ್ಮ ಸಂತಾನಾಭಿವೃದ್ಧಿಯಲ್ಲಿ ಹಾಗೂ ಮಕ್ಕಳ ಯೋಗಕ್ಷೇಮದಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುವುದು ಪ್ರಕೃತಿ ಸಹಜ ಉದ್ದೇಶ. ಆದರೆ ಈ ಉದ್ದೇಶ ಕೈಗೂಡಿದ ನಂತರವೂ ಹೆಚ್ಚಾಗಿಯೇ ಕೈಗೂಡಿದ ನಂತರವೂ ಹಣ ಸಂಪಾದನೆ, ಯಶಸ್ಸು ಮುಂತಾದವೆಲ್ಲ ತರ್ಕ, ಬುದ್ಧಿಗಳನ್ನೂ ಮೀರಿ ಸತತವಾಗಿ ನಡೆಯುತ್ತಲೇ ಇರಬೇಕೆ? ಯಾರು ಬೆಳಿಗ್ಗೆಯ ನಿಯಮವನ್ನು ಅಂದರೆ ಪ್ರಾಕೃತಿಕ ಉದ್ದೇಶವನ್ನು ಮಧ್ಯಾಹ್ನಕ್ಕೂ ಕೊಂಡೊಯ್ಯುವರೋ ಅವರು ಹಾಗೆ ಮಾಡುವುದಕ್ಕಾಗಿ ತಮ್ಮ ಆತ್ಮದ ಬೆಲೆಯನ್ನೇ ತೆರಬೇಕಾಗುತ್ತದೆ—ಬೆಳೆಯುತ್ತಿರುವ ತರುಣ ತನ್ನ ಬಾಲಿಶ ಅಹಂಕಾರವನ್ನು ಚಿಗುರಿಸಲು ಪ್ರಯತ್ನಿಸಿದರೆ, ಈ ತಪ್ಪಿಗಾಗಿ ಸಾಮಾಜಿಕ ವೈಫಲ್ಯದ ಬೆಲೆ ತೆರಬೇಕಲ್ಲ ಹಾಗೆ. ಹಣ ಸಂಪಾದನೆ, ಸಾಮಾಜಿಕ ಅಸ್ತಿತ್ವ, ಕುಟುಂಬ ಮತ್ತು ಸಂತಾನಪಾಲನೆ ಇವೆಲ್ಲ ಏನಿದ್ದರೂ ಕೇವಲ ಪ್ರಕೃತಿಯೇ ವಿನಾ ಸಂಸ್ಕೃತಿ ಅಲ್ಲ. ಸಂಸ್ಕೃತಿ ಇರುವುದು ಪ್ರಕೃತಿಯ ಉದ್ದೇಶದ ಆಚೆ. ಸಂಸ್ಕೃತಿ ಬಾಳಿನ ಉತ್ತರಾರ್ಧದ ಅರ್ಥ ಹಾಗೂ ಉದ್ದೇಶ."

ಆಧುನಿಕ ಯುಗದಲ್ಲಿ ವ್ಯಾಪಕವಾಗಿರುವ ಪೈಪೋಟಿಯ ಬದುಕು ಅನೇಕ ಪಾಶ್ಚಾತ್ಯ ಚಿಂತಕರನ್ನು, ಮನಶ್ಶಾಸ್ತ್ರಜ್ಞರನ್ನು ದಿಗ್ಭ್ರಮೆಗೊಳಿಸಿದೆ. ಜನ ಬಾಹ್ಯಜಗತ್ತಿನಲ್ಲಿ ಏನನ್ನಾದರೂ ಸಾಧಿಸುವುದರಲ್ಲೇ ಮುಳುಗಿರುತ್ತಾರೆ. ಈ ಸಾಧನೆಯ ಪೀಡನೆ ಮಾನವನ ಒಳಬದುಕನ್ನು ಹೆಚ್ಚು ಹೆಚ್ಚು ಬಡವಾಗಿಸಬಲ್ಲದು ಎಂಬುದನ್ನು ಅವರು ಮನಗಾಣುತ್ತಿದ್ದಾರೆ.

ಈ ಎಲ್ಲ ಉನ್ನತಾಭಿವೃದ್ಧಿಯ ಹಾಗೂ ಶ್ರೀಮಂತ ಸಮಾಜಗಳಲ್ಲಿ ಮಾನವನ ಭವಿಷ್ಯ ಏನು? ಕಾತರ, ಹತಾಶೆ, ಬೇಸರ, ಮಾನಸಿಕ ಕುಸಿತ, ಖಿನ್ನತೆ—ಇವಲ್ಲದೆ ಬೇರೇನೂ ಅಲ್ಲ. ಉನ್ನತ ಸಾಧನೆಗಳಿದ್ದರೂ, ಎಲ್ಲೋ ಏನೋ ಕೊರತೆ ಯಿದೆ. ಮಾನವನ ಭವಿಷ್ಯ ಎಂದರೆ ಕೇವಲ ಬಾಹ್ಯವೈಭವದ ನಾನಾ ರೂಪಗಳು ಎಂದಲ್ಲ ಎನ್ನುತ್ತದೆ ವೇದಾಂತ. "ಜಗತ್ತಿನಲ್ಲಿ ನಾನು ಏನೋ ಸಾಧಿಸಿದ್ದೇನೆ, ನನಗೆ ಸಮಾಜದ ಪ್ರಶಂಸೆ ಸಿಗುತ್ತಿದೆ" ಎಂಬುದಲ್ಲ ಮುಖ್ಯ. "ನನ್ನ ಆಧ್ಯಾತ್ಮಿಕ ಸಾಧ್ಯತೆಗಳ ಅರಳುವಿಕೆಯಿಂದ ಮೂಡುವ ಯಾವುದೋ ಒಂದು ಆಂತರಿಕ ಮಹತ್ತು ಇದೆ" ಎಂಬುದನ್ನು ಕಂಡುಕೊಳ್ಳುವುದು ಮುಖ್ಯ. ಅದೇ ಬಾಳಿನ ಆಧ್ಯಾತ್ಮಿಕ ಸಿದ್ಧಿ. ಇಂದು ಪಶ್ಚಿಮ ದೇಶಗಳು ಇದರ ಅಗತ್ಯವನ್ನು ಕಂಡುಕೊಳ್ಳುತ್ತಿವೆ. ಮುಕ್ತವಾಗಿರುವುದು, ನಿರ್ಭಯವಾಗಿರುವುದು, ಕೃತಕೃತ್ಯವಾಗಿರುವುದನ್ನು ಪಡೆಯುವುದೇ ಮಾನವನ ನಿಜವಾದ ಭವಿಷ್ಯ.

## ಬಾಹ್ಯ ಮತ್ತು ಆಂತರಿಕ ಸಾಧನೆಗಳ ಆವಶ್ಯಕತೆ

ಪ್ರಾಚೀನ ಭಾರತದ ಸಂತರ ಮತ್ತು ಚಿಂತಕರ ಅಭಿಪ್ರಾಯದಲ್ಲಿ ಮಾನವನ ಬಾಹ್ಯ ಸಾಧನೆ ಹಾಗೂ ಆಂತರಿಕ ಸಫಲತೆಗಳಲ್ಲಿ ಕಂದರವೇನೂ ಇರಬೇಕಾಗಿಲ್ಲ. ಮಾನವನ ಭೌತಿಕ ಜೀವನ ಇದು, ಅವನನ್ನು ಸುತ್ತುವರಿದಿರುವ ಭೌತಿಕ ಜಗತ್ತು ಇದು; ಅದನ್ನು ವೈಜ್ಞಾನಿಕ ಮನೋಭಾವದಿಂದ ಅಧ್ಯಯನ ಮಾಡೋಣ. ಆದರೆ ಮಾನವನ ಆಳಾತಿಆಳಗಳನ್ನು, ಅವನ ಪ್ರಜ್ಞೆ, ಚಿಂತನೆಗಳು, ಭಾವನೆಗಳು, ಅಹಂಕಾರ ಮತ್ತು ಅವನ ಆತ್ಮತತ್ವದ ಭಾವನೆ ಇವುಗಳನ್ನೂ ಅಧ್ಯಯನ ಮಾಡುವ ಆವಶ್ಯಕತೆ ಇದೆ. ಎಲ್ಲ ಕಡೆಯ ಯುವಜನರೂ ಇಂದು ಈ ಎರಡೂ ವಿಚಾರಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಮೊದಲನೆಯದು ಬಾಹ್ಯ ಪ್ರಕೃತಿಯ ಶಕ್ತಿಗಳನ್ನು ನಿಯಂತ್ರಿಸುವುದು, ಅಂದರೆ ನಮ್ಮ ಬಾಹ್ಯ ಪ್ರಕೃತಿ ಮತ್ತು ಸಾಮಾಜಿಕ ಪರಿಸರಗಳನ್ನು ನಮ್ಮ ಪ್ರಜ್ಞೆ ಯಾವ ಮಟ್ಟದಿಂದ ನಿಭಾಯಿಸುವುದೋ ಅದನ್ನು ಎತ್ತರಿಸುವುದು. ಅದರಿಂದ ಬಡತನದ ನಿರ್ಮೂಲನ ಸಾಧ್ಯ. ಅದರಿಂದ ಕೋಟಿಕೋಟಿ ಜನರಿಗೆ ಒಳ್ಳೆಯ ಜೀವನವನ್ನು ಏರ್ಪಡಿಸುವುದು ಸಾಧ್ಯ. ಎರಡನೆಯದರಿಂದ ಅಂದರೆ, ಮಾನವನ ಒಳಪ್ರಕೃತಿಗೆ ಸ್ವಲ್ಪವಾದರೂ ಗಮನ ನೀಡುವುದರಿಂದ, ಮಾನಸಿಕ ಶಕ್ತಿಯನ್ನು ಯಶಸ್ವಿಯಾಗಿ ಶಿಸ್ತುಗೊಳಿಸಿ ನಯಗೊಳಿಸಿ ಅದರ ಗುಣ ಮತ್ತು ಪ್ರಮಾಣಗಳ ಮಟ್ಟವನ್ನು ಹೆಚ್ಚಿಸುವುದರಿಂದ ವ್ಯಕ್ತಿ ಶಾಂತಿ ಮತ್ತು ಕರುಣೆಗಳ ಕೇಂದ್ರವಾಗುತ್ತಾನೆ. ✸